ನಾನು ಬರುವಂಥ ಜಾಗವೇ ಅಂದು ಹಲ್ಲು ಕಡಿಯುತ್ತಿದ್ದ. ಆದರೆ, ಅವರಾರು ಅವನ ಮಾತು ಕೇಳಿಸಿಕೊಳ್ಳುವ ಸ್ಥಿತಿಯಲ್ಲಿರಲಿಲ್ಲ. ಯಾಕೆಂದರೆ, ಹಿಂದಿನ ದಿನ ಚರಂಡಿ ಕ್ಲೀನು ಮಾಡುತ್ತಿದ್ದ ಆ ಆಳುಗಳೆಲ್ಲ ಕೈ ಮುಗಿಯುತ್ತ ಅದೇ ಕೈ ಅಗಲಿಸಿ, 'ಮೇಸ್ತ್ರೀ ಸಾರೇ ವುಂಗ ಮಗನುಡೆಯ ಕಲ್ಯಾಣಮ್, ಎದಾವುದು' ಎಂದು ಬಾಯಿಬಿಟ್ಟರು.

ಮಂಗೈ ಹೊಟ್ಟೆಯ ಸಿಟ್ಟು ತೋರಿಸಲಾಗದೆ ಎಲ್ಲಾದರೂ ಕುಡಿದು ಸಾಯಿರಿ ಮದುವೆಗೆ ನೀವು ಬಂದರೆಷ್ಟು, ಬಿಟ್ಟರೆಷ್ಟು ಅಂದು ಜೇಬಿನಲ್ಲಿದ್ದಷ್ಟು ಕಾಸು ನೀಡಿದ. ಒಂದೋ ಎರಡೋ ಪಾಕೀಟು ಹಾಕಿದವರು ಸ್ಮಶಾನದ ದಾರಿ ಹೇಗೋ ಹಿಡಿದು ಬಂದರು. ಜಾಸ್ತಿ ಹಾಕಿದವರು ದಾರಿ ಹೆಜ್ಜೆಯ ತೂಕ ತಪ್ಪಿ ಬೀಳುತ್ತ, ಏಳುತ್ತ ಅಲ್ಲೇ ಚರಂಡಿಯ ಆಜುಬಾಜು ಬಿದ್ದುಬಿಟ್ಟರು. ಉಳಿದವರು ತಾರಾಡಿ ಸ್ಮಶಾನದ ಗೇಟಿನ ಬಳಿ ಆಗಮಿಸಲು ತಂಗಮಣಿ ಓಡಿಹೋಗಿ, 'ವಾಂಗೋ, ವಾಂಗೋ ದೈವಂ ಮಾದರಿ ವಂದೀಂಗೋ' ಅಂದು ಹೆಗಲ ಟವಲ್ಲನ್ನು ನಡುವಿಗೆ ಸುತ್ತಿ ವಿನಯದಿಂದ ಸ್ವಾಗತಿಸಿದ. ನಶೆಯೇರಿಸಿ ಬಂದ ಆಳುಗಳೆಲ್ಲಾ ವಿವಾಹ ಮಂಟಪದ ಬಳಿಯಲ್ಲಿ ಮಂಗೈ ಧಣಿಯನ್ನು ಕಂಡದ್ದೇ ಅಪರಿಮಿತ ಗೌರವದಿಂದ ಕಾಲಿಗೆರಗಿದರು. ನಮಸ್ಕರಿಸಿ ಮೇಲೇಳಲಾರದೆ ಅಲ್ಲೇ ಕುಕ್ಕರಿಸಿ ಬಿದ್ದರು. ಇಷ್ಟಾದರೂ ಮಂಗೈ ಮೇಸ್ತ್ರಿ ತನ್ನ ಪೌರಕಾರ್ಮಿಕರು ಕಾಲಿಗೆರಗುವಾಗ್ಗೆ ಬೀಗ ತಂಗಮಣಿಯ ಕಡೆಗೆ ದೊಡ್ಡಸ್ತಿಕೆಯ ನೋಟ ಬೀರುತ್ತಾ ಊರೊಳಗೆ ನಾನೇನು ಎಂಬುದ ಕಂಡಿರಾ, ಅಂಥ ಡಿಗ್ನಿಟಿ ಇರುವವನ ಮರ್ಯಾದೆ ಈ ಮಸಣದ ಮಧ್ಯದಲ್ಲಿ ಸಮಾಧಿ ಆಗುತ್ತಿದೆಯಲ್ಲ ಎಂಬಂತೆ ಮತ್ತೆಮತ್ತೆ ಗುರುಗಾಯಿಸಿ ನೋಡತೊಡಗಿದ. ಅಲ್ಲೇ ವರನಾಗಿ ನಿಂತ ಮಗನನ್ನೂ, ಮುಹೂರ್ತ ನೆರವೇರಿಸಲು ಸಿದ್ಧವಾಗಿದ್ದ ಹೆಂಡತಿಯನ್ನೂ ಇನ್ನಷ್ಟು ಸಿಟ್ಟಿನಿಂದ ದೃಷ್ಟಿಸಿದ.

ವಿವಾಹ ಮಂಟಪಕ್ಕೆ ಬಂದ ಕಣ್ಣಾಸೆಲ್ವಿ ಒಂದು ವಾರದಿಂದ ಮುಹೂರ್ತದ ವೇಳೆ ತಾನು ಹೇಗೆ ಅಲಂಕಾರವಾಗಿರಬೇಕೆಂದು ಯೋಚಿಸಿ ಕನ್ನಡಿ ನೋಡಿ, ನೋಡಿ ಸಾಕಾಗಿ ಕಡೆಗೆ ದಾರಿ ಕಾಣದೆ ಮದುವೆಗೆ ಕೊಂಡಿದ್ದ ಒಂದೇ ಒಂದು ಹೊಸ ಸೀರೆಯಲ್ಲಿ ಬಂದು ನಿಂತಳು.

ಆದರೆ, ಅವ್ವ ಕಣ್ಣಾಸೆಲ್ವಿಗೆ ಆ ಹಸಿರು ಸೀರೆ ಉಡಿಸುವಲ್ಲಿ, ರವಿಕೆಯನ್ನ ತೊಡಿಸುವಲ್ಲಿ ಕೆಳಹೊಟ್ಟೆಯನ್ನು ಅನುಮಾನದಿಂದ ಅಳೆಯುತ್ತಾ ಆಗೀಗ ನಿಟ್ಟುಸಿರು ಬಿಡುವಂತಿದ್ದಳು. ಪಳನಿಯಾದರೂ ಪ್ರೀತಿಯೇ ತುಂಬಿ ತುಳುಕುತ್ತಿರುವ ತನಗೆ ಸೂಟುಬೂಟಿನ, ಚಿನ್ನದ ಅಲಂಕಾರವಾದರೂ ಯಾಕೆ, ಸದ್ಯ ಸಕಲರ ಸಮ್ಮುಖದಲ್ಲಿ ಸೆಲ್ವಿಯ ಕೈ ಹಿಡಿದುಬಿಟ್ಟರೆ ಸಾಕೆಂಬ ಆತುರದಲ್ಲಿದ್ದನು. ಹೆಣದ ಮುಂದೆ ತಮಟೆ ಬಾರಿಸುವವರು ಆವತ್ತು ಸ್ಮಶಾನದ ಯಜಮಾನರ ಪುತ್ರಿಯ ಕಲ್ಯಾಣವೆಂದು ಬಂದವರು ಯಾವ ಕಾಸು, ದುಡ್ಡು ಬೇಡವೆಂಬ ಪ್ರೀತಿಯಿಂದ ತಮಟೆಗೆ ಏಟು ಹಾಕುತ್ತ ಭಾರಿ ಸದ್ದು ಮಾಡುತ್ತಿದ್ದರು.

ಶೆಡ್ಡಿನಿಂದ ಅತ್ತಕಡೆ ಮೂರು ಕಲ್ಲು ಒಟ್ಟಿ ಅದರ ಮೇಲೆ ಮೂರು ಪಾತ್ರೆಗಳಲ್ಲಿ ಅನ್ನ, ಸಾಂಬಾರು, ಪಾಯಸ ಬೇಯುತ್ತಿದ್ದು ಅದರ ಸುವಾಸನೆ ನೆರೆದವರೆಲ್ಲರ ಮನಸ್ಸು, ಮೂಗನ್ನು ಅರಳಿಸುತ್ತಿತ್ತು.

★★★

ಅವ್ವ ತಿರುಮೊಳಿಯು ಮಗಳ ಮದುವೆಯಾದ ಮಾರನೇ ದಿನದಿಂದ ಒಂದು ವಾರ ಕಾಲ ಸ್ಮಶಾನದ ಆಚೆ ಸುತ್ತಿನ ವಪ್ಪಾರೆಯವರಿಗೆಲ್ಲ ಅವರು ವಿಚಾರಿಸದಿದ್ದರೂ ಮಗಳು, ಅಳಿಯನನ್ನು ಮದರಾಸಿನ ಸಿನಿಮಾದವರು ಕರೆದುಬಿಟ್ಟಿದ್ದರಿಂದ ಅರ್ಜೆಂಟರ್ಜೆಂಟಿನಲ್ಲಿ ಕಲ್ಯಾಣ ಮುಗಿಸಿ ಕಳುಹಿಸಬೇಕಾಯಿತೆನ್ನುತ್ತ, ಯಾರನ್ನೂ ಕರೆಯಲಾಗಲಿಲ್ಲವೆನ್ನುತ್ತ ಆ ನಡುವೆಯೇ ಮಗಳನ್ನು ಕಳೆದುಕೊಂಡ ವ್ಯಥೆಯ ಮುಖದಲ್ಲಿ ಹೇಳಿ ಬಂದಳು. ಇತ್ತ ಮಂಗೈಪುಳ್ಳೆ ಮಗನು ಮದರಾಸಿನತ್ತ ಪ್ರಯಾಣವಾದವಾರವೆಲ್ಲ ತಾನು ಯಾವ ಬೀದಿಯಲ್ಲಿ ನಿಂತುಕ್ಲೀನು ಮಾಡಿಸುತ್ತಿರುವೆನೆಂಬ ಧ್ಯಾಸವೇ